

## 1

ಹೊರಗೆ ಹದವಾಗಿ ಬೀಳುತ್ತಿರುವ ಬಿಸಿಲು. ಹೊಳೆಯುತ್ತಿರುವ ಎದುರಿನ ಕಾಡಿನ ರಸ್ತೆಯ ಕೆಂಪುಮಣ್ಣು. ದೂರದಲ್ಲೆಲ್ಲೋ ರಸ್ತೆಯ ಮೇಲಿನ ವಾಹನವೊಂದರ ಕ್ಷೀಣ ಸದ್ದು. ಡಿಸೆಂಬರ್ ತಿಂಗಳ ಕೊನೆಯ ದಿನ. ಯಲ್ಲಾಪುರ ಸಮೀಪದ ಘೋರಾರಣ್ಯದ ಕತ್ಲೆಕಾನು ಎಂಬೂರಿನಲ್ಲಿ ಹಿಂದೆಂದಿಗಿಂತ ಹೆಚ್ಚಿನ ಚಳಿ. ಭಟ್ಟರ ಮನೆಯ ಬಾಗಿಲ ಚೌಕಟ್ಟನ್ನು, ಅದರಾಚೆಯ ಪಡಿಯ ಚಪ್ಪರವನ್ನು, ಅದರಾಚೆಯ ವಿಶಾಲ ಕಣವನ್ನೂ, ಅದರಾಚೆಯ ಸರಗೋಲಿನ ದಣಪೆಯನ್ನೂ ಮೀರಿದ ವೈಶಾಲಿ ಪುಟ್ಟಿಯ ಕಣ್ಣುಗಳು ಅಲ್ಲಿ ಬಿದ್ದಿದ್ದ ಬೈಸಿಕಲ್ಲನ್ನು ನೋಡತೊಡಗಿದವು. ತನ್ನದೇ ಸಣ್ಣ ಬೈಸಿಕಲ್ಲು ದಣಪೆಯ ಆಚೆಗಿನ ಬಳಕು ದಾರಿಯಲ್ಲಿನ ನೀಳ ಸಾಗುವಾನಿ ಮರಗಳ ಸಾಲಿನಲ್ಲಿತ್ತು. ಒಮ್ಮೆಲೆ ಆಕೆಗೆ ಅದು ಪಾಪದ್ದು, ಅನಾಥವಾದದ್ದು ಅನ್ನಿಸಿತು. ಸುಸ್ತಾಗಿ, ಊಟವಿಲ್ಲದೇ, ಸಾಯುವಂತೆ ಅರ್ಧ ಮಲಗಿ, ಅರ್ಧ ಒರಗಿದ್ದಂತೆ ಆಕೆಯ ಕಣ್ಣಿಗೆ ಕಾಣಿಸಿತು. ಬೈಸಿಕಲ್ಲು ಸಾಯುವುದನ್ನು ನಾನು ಇಂದೇ ನೋಡುತ್ತಿದ್ದೇನಾ.. ಎಂಬಂತೆ ಬೆಚ್ಚಿದಳು. ಉಗುಳು ನುಂಗುತ್ತ ಸುತ್ತಲೂ ಕಣ್ಣು ಹಾಯಿಸಿದಳು. ತಾನು ಕೂತ ಮನೆಯ ಒಳಗೊಂದು ತರಹದ ಲೋಕ, ತನ್ನಿಂದಾಚೆಯ ಹೊಸ್ತಿಲಾಚೆಯದ್ದೇ ಮತ್ತೊಂದು ಲೋಕ ಅನ್ನಿಸಿತವಳಿಗೆ.

'ನಂಗ್ ಹೋಗ್ಲೀಕಿತ್ತ್, ರಾಶಿ ಲೇಟಾತ್ತ್..' ಎಂದು